ಮಾರಾಟಗಾರರೆಂದು ಬೋರ್ಡು ನೇತುಬಿಟ್ಟು ಹಳ್ಳಿಹಳ್ಳಿಗಳಲ್ಲೂ ವ್ಯಾಪಾರ ನಡೆಸುತ್ತಿದ್ದ ಬಾರು ಮಾಲೀಕರು ಒಬ್ಬರೆ? ಇಬ್ಬರೆ?

ಸಿರಿವಂತೆಯ ಜೋಗಾ ರೋಡಿನಲಿದ್ದ 'ಬ್ಲೂಮೂನ್ ಬಾರ್ ಎಂಡ್ ರೆಸ್ಟೊರೆಂಟ್' ಎಂದು ಬೋರ್ಡ್ ಹಾಕಿಕೊಂಡು ಒಳ್ಳೆಯ ವ್ಯಾಪಾರ ನಡೆಸುತ್ತಿದ್ದ ರಘು ಶೆಟ್ಟಿಯು ತಾಳಗುಪ್ಪಾದ ಮದ್ಯವ್ಯಸನ ಬಿಡಿಸುವ ಶಿಬಿರದಿಂದ ತನಗಾಗುವ ನಷ್ಟವನ್ನು ಮುಂಚಿತವಾಗಿಯೇ ಊಹಿಸಿ, ಇದ್ದಕ್ಕಿದ್ದಂತೆ ತನ್ನ ಅಂಗಡಿಯ ಹಳೇ ಬೋರ್ಡನ್ನು ಒಳಗಿಟ್ಟು ಹೊರಗೆ, 'ಶ್ರೀ ಮಂಜುನಾಥೇಶ್ವರ ವೈನ್ಸ್' ಎಂದು ಹೊಸ ಬೋರ್ಡು ಬರೆಸಿ ದೊಡ್ಡದಾಗಿ ತೂಗುಹಾಕಿದ. ಹಾಗೆಯೇ ಅದರ ಮೇಲೆ ಸ್ವಲ್ಪ ಚಿಕ್ಕದಾಗಿ, 'ಶ್ರೀ ಅಣ್ಣಪ್ಪ ಸ್ವಾಮಿ ಪ್ರಸನ್ನ' ಎಂದೂ ಚಿತ್ರ ಸಹಿತ ಬರೆಸಿದ. ಶಿಬಿರವು ಹತ್ತಿರ ಬರುತ್ತಿದ್ದಂತೆಯೇ ತಾನು ಧರ್ಮಸ್ಥಳದ ಹೆಗಡೆಯವರಿಂದ ಆಶೀರ್ವಾದ ತೆಗೆದುಕೊಂಡು ಬಂದಿದ್ದೇನೆಂದೂ, ಆದ್ದರಿಂದಲೇ ಅಂಗಡಿಯ ಹೆಸರು ಬದಲಿಸಿದ್ದಾಗಿ ಹೇಳಿಕೊಳ್ಳತೊಡಗಿದ. ಮಂಜುನಾಥ ಸ್ವಾಮಿ ಮತ್ತು ಹೆಗಡೆಯವರ ಫೋಟೊವನ್ನು ಎದ್ದುಕಾಣುವಂತೆ ಜಗಮಗ ಬೆಳಕಿನಲ್ಲಿಟ್ಟು, ಇದರ ಪೂಜೆ ಮಾಡದೆ ಒಂದು ಗುಟುಕು ಹೆಂಡವನ್ನೂ ಮಾರುವುದಿಲ್ಲವೆಂದೂ ಪ್ರಚಾರಮಾಡಿ, ತನ್ನ ಉಪಾಯಕ್ಕೆ ತಾನೇ ಬೆನ್ನು ತಟ್ಟಿಕೊಂಡು ನೆಮ್ಮದಿಯ ನಗುವನ್ನು ಬೀರುತ್ತಿದ್ದ.

ಒಂದು ದಿನ ರಾಜೇಶ, ರಘು ಶೆಟ್ಟಿಯ ಅಂಗಡಿಗೆ ಬಂದು, ಶಿಬಿರದ ಪಾಂಪ್ಲೆಟ್ಟನ್ನು ಕೊಟ್ಟು, ಜನಹಿತಕ್ಕಾಗಿ ತಾವೆಲ್ಲರೂ ಮಾಡುತ್ತಿರುವ ಈ ಶಿಬಿರಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಕೊಡಬೇಕೆಂದೂ, ಸಮಿತಿಯ ಸದಸ್ಯರೆಲ್ಲರೂ ಮತ್ತೊಮ್ಮೆ ಬರುವುದಾಗಿಯೂ, ಅನುಕೂಲಸ್ಥರಿಂದ ಮತ್ತು ತೀರಾ ಹತ್ತಿರದವರಿಂದ ಮಾತ್ರ ಧನ ಸಹಾಯವನ್ನು ಕೋರುತ್ತಿರುವುದಾಗಿಯೂ ಹೇಳಿದ. ಇವನ ಈ ಕೋರಿಕೆಯಿಂದ ಸಮಾಧಾನ ಪಟ್ಟುಕೊಂಡ ರಘು ಶೆಟ್ಟಿಯು ಎಂಟು ಹತ್ತು ದಿನ ಅಂಗಡಿಯನ್ನು ಮುಚ್ಚುವುದು ಮತ್ತು ಹತ್ತೋ ಇಪ್ಪತ್ತೋ ಸಾವಿರ ಕೊಟ್ಟು ಕೈತೊಳೆದುಕೊಳ್ಳುವುದು ಎಂದುಕೊಂಡು ನಿಟ್ಟುಸಿರು ಬಿಡುವಷ್ಟರಲ್ಲಿ ರಾಜೇಶ ತಣ್ಣೀರು ಎರಚಿದ:

"ರಘು, ನಮ್ಮ ಶಿಬಿರಕ್ಕೆ ನೀನು ದುಡ್ಡನ್ನೇನೂ ಕೊಡೋದು ಬ್ಯಾಡಪ್ಪಾ; ಆದರೆ, ಶಿಬಿರ ಶುರು ಆಗೋ ಒಂದು ವಾರ ಮುಂಚೆ, ಅಂಗಡಿಯನ್ನು ಮುಚ್ಚಿ ಕನಿಷ್ಠ ಆರು ತಿಂಗಳು ಮತ್ತೆ ಬಾಗಿಲು ತೆಗೀಬಾರದು ಅಷ್ಟೆ. ಇದೊಂದು ದೊಡ್ಡ ಉಪಕಾರ ನೀನು ಮಾಡ್ಲೇಬೇಕು. ಉಪಕಾರ ನಂಗಲ್ಲಪ್ಪ, ಸುತ್ತ ಮುತ್ತಲಿನ ಸಾವಿರಾರು ಕುಟುಂಬಕ್ಕೆ..."

ಹೆಚ್ಚೂ ಕಡಿಮೆ ರಾಜೇಶನ ವಯಸ್ಸಿನವನೇ ಆಗಿದ್ದ ರಘು ಶೆಟ್ಟಿ, ಹಳೆಯ ಗೆಳೆತನದ ಸಲುಗೆಯಲ್ಲಿಯೇ ಕಡ್ಡಿ ಮುರಿದು ಹೇಳಿದ:

"ಹೌದು ರಾಜೂ, ನಿಂಗೆ ನಮ್ಕತೆ ಎಲ್ಲಾ ಗೊತ್ತಲ್ಲಪ್ಪಾ... ನಾನೊಬ್ಬ ಏನೋ ಹೇಳಿ ಒಪ್ಪಿಗೆ ಕೊಡೋ ಮಾತಲ್ಲ ಇದು. ಮೇಲಿನವರಿಗೆ ವಾರವಾರ ಪೇಮೆಂಟ್ ಮಾಡಬೇಕು; ಇನ್ಸ್ಪೆಕ್ಟರೀಗೆ ದಿನಾ ದಿನ ಪಿಗ್ಮಿ ಕಟ್ಟಿದಾಂಗೆ ಕಟ್ಬೇಕು; ಒಂದು ವಾರ ಎರಡು ವಾರ ಸರಿ ತಿಂಗಳುಗಟ್ಟಲೆ ಮುಚ್ಚೋದು ಅಂದ್ರೆ, ಕಷ್ಟ ಕಣೋ... ಅದೆಲ್ಲಾ ಆಗಿಹೋಗೋ ಮಾತೇ ಅಲ್ಲ."

"ನೋಡು ರಘು, ಇದು ಹ್ಯಾಗಿದೆ ಅಂದ್ರೆ, ಯಾರೋ ಯಾವತ್ತೊ ಊರಿಗೆ ಬೆಂಕಿ ಹಚ್ಚಿಬಿಟ್ಟಿದಾರೆ; ನಾವೆಲ್ಲಾ ಸೇರಿ ಅದನ್ನು ಆರ್ಸಿ ಊರನ್ನ ಉಳಿಸ್ಬೇಕು, ಅಷ್ಟೆ. ಅದನ್ನ ಬಿಟ್ಟು, ನಿಮ್ಮಷ್ಟಕ್ಕೆ ನೀವು ಆರಿಸ್ತಾ ಇರಿ. ನಮ್ಮಷ್ಟಕ್ಕೆ ನಾವು ಎಣ್ಣೆ ಸುರಿತಾ ಇರ್ತೀವಿ ಅಂದ್ರೆ ಹ್ಯಾಗೆ?